ದಿನಾಂಕ 10.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಕೆ.ಎಂ. ವಕೀಲರಿಂದ :-**

3. ಸಾಕ್ಷಿಗೆ 2 ಭಾವಚಿತ್ರಗಳನ್ನು ತೋರಿಸಿ ಅದರಲ್ಲಿರುವ ಮನೆ ನೀವು ಕಟ್ಟಿರುವುದು ಎಂದರೆ ಸಾಕ್ಷಿ ಅದು ನಮ್ಮ ತಂದೆ ಕಟ್ಟಿರುವುದು ಎಂದು ನುಡಿಯುತ್ತಾರೆ. ಸಾಕ್ಷಿ ಭಾವಚಿತ್ರಗಳನ್ನು ಒಪ್ಪಿಕೊಂಡಿದ್ದು ಅದನ್ನು ನಿಡಿ-1 ಮತ್ತು 2 ಎಂದು ಗುರುತಿಸಲಾಯಿತು. ಪ್ರತಿವಾದಿಗಳಿಗೆ ನಿಡಿ-1 ಮತ್ತು 2 ರಲ್ಲಿ ಕಾಣಿಸಿರುವ ಮನಗಳಲ್ಲಿ ಭಾಗ ಇದೆ ಮತುತ ಅದರ ಪಕ್ಕದಲ್ಲಿ ಯೂ ಮನೆಗಳಿವೆ ಅದರ ಭಾವಚಿತ್ರವನ್ನು ತೆಗೆದಿಲ್ಲ ಅದರಲ್ಲಿಯೂ ಪ್ರತಿವಾದಿಯರಿಗೆ ಭಾಗ ಇದೆ. ಭಾವಚಿತ್ರ ತೆಗೆಯದೇ ಇರುವ ಮನೆಯಲ್ಲಿ ನಾವು ವಾಸ ಇಲ್ಲ ಪ್ರತಿವಾದಿಗಳು ವಾಸ ಇದ್ದಾರೆ. ನಿಡಿ-1 ಮತ್ತು 2 ಭಾವಚಿತ್ರದಲ್ಲಿರುವ ಮನೆಯಲ್ಲಿ ನಾನು, ನಮ್ಮ ತಾಯಿ ವಾಸ ಇದ್ದೇವೆ. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿ ಸಾಕ್ಷಿ ಆ ಭಾವಚಿತ್ರವನ್ನು ಒಪ್ಪಿಕೊಂಡಿದ್ದು ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಸಾಕ್ಷಿ ನಿಡಿ-3 ರಲ್ಲಿ ಪ್ರತಿವಾದಿಗಳು ವಾಸ ಇದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮತ್ತೊಂದು ಭಾವಚಿತ್ರ ತೋರಿಸಿ ಸಾಕ್ಷಿ ಆ ಭಾವಚಿತ್ರದಲ್ಲಿರುವ ಮನೆ 3 ನೇ ವಾದಿ ಖರೀದಿ ಮಾಡಿರುವ ಮನೆ ಅದಕ್ಕೂ ದಾವೆ ಆಸ್ತಿಗಳಿಗೂ ಯಾವುದೇ ಸಂಬಂದ ಇಲ್ಲ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು ನಿಡಿ-4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಭಾವಚಿತ್ರ ತೋರಿಸಿ ಅದರಲ್ಲಿರುವ ಹೊಲ ನಿಮ್ಮ ಭಾಗಕ್ಕೆ ಬಂದಿರುತ್ತದೆ ಅದನ್ನು ನೀವು ಮತ್ತು ನಿಮ್ಮ ಹೆಂಡತಿ ಉಳುಮೆ ಮಾಡಿ ಬೆಳೆ ಬೆಳೆಯುತ್ತಿದ್ದೀರಿ ಎಂದರೆ ಸಾಕ್ಷಿ ಯಾರಿಗೂ ಭಾಗ ಆಗಿಲ್ಲ ಅವರವರು ಸ್ವಲ್ಪ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಸ.ನಂ.70/1 ರಲ್ಲಿ 12 ಗುಂಟೆ ಜಾಗ ಇದ್ದು, ಅದರಲ್ಲಿ 6-6 ಗುಂಟೆ ವಾದಿ 3 ಮತ್ತು 4 ರವರಿಗೆ ಅರ್ಧರ್ಧ ಭಾಗ ಆಗಿದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಭಾಗದಲ್ಲಿ 3 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆ, 3 ನೇ ಪ್ರತಿವಾದಿಯ ಜಾಗ ಬೀಳು

ಬಿಟ್ಟಿದ್ದಾರೆ ಎಂದರೆ ಸರಿಯಲ್ಲ, ಯಾರೂ ಬೀಳು ಬಿಟ್ಟಿಲ್ಲ ಅವರವರ ಜಾಗದಲ್ಲಿ ಅವರು ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಈ ವಿಚಾರ ನಿಮಗೆ ಗೊತ್ತಿದ್ದರೂ ಸಹ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

4.ಸ.ನಂ.23/6 ರಲ್ಲಿ 3 ನೇ ಪ್ರತಿವಾದಿಯ ಭಗದಲ್ಲಿ ಕೃಷಿಹೊಂಡಾ ಇದೆ ಎಂದರೆ ಸರಿಯಲ್ಲ, ಅದು ಮಳೆ ನೀರು ಹೋಗುವ ಹಳ್ಳ ಮೊದಲಿನಿಂದಲೂ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ಸ.ನಂ.23/6 ಐಟಂ ನಂಬರ್ 1 ರಲ್ಲಿ 4 ನೇ ವಾದಿ ಸಹದೇವಪ್ಪನಿಗೆ 20 1/2 ಗುಂಟೆ 3 ನೇ ವಾದಿಗೆ 20 1/2 ಗುಂಟೆ ಹೋಗಿದೆ ಎಂದರೆ ಸರಿಯಲ್ಲ. ಐಟಂ ನಂಬರ್ 1 ರಲ್ಲಿರುವ ಕೃಷಿ ಹೊಂಡಾ ಇದ್ದು ಅಲ್ಲಿ ರೇಷ್ಮೆ ಬೆಳೆ ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ. ಐಟಂ ನಂಬರ್ 1 ರಲ್ಲಿ 3 ನೇ ವಾದಿ ರಾಗಿ ಬೆಳೆಯುತ್ತಿದ್ದಾರೆ ಎಂದರೆ ಸರಿ. 4 ನೇ ವಾದಿಗೆ ಹೋಗಿರುವ ಭಾಗವನ್ನು 3 ನೇ ವಾದಿ ಉಳುಮೆ ಮಾಡುತ್ತಿದ್ದು ಅದರಲ್ಲಿ ಜೋಳ ಬೆಳೆದಿದ್ದಾರೆ ಎಂದರೆ ಸರಿಯಲ್ಲ. ಇದೆಲ್ಲಾ ನಿಜ ಇದ್ದರೂ ಸುಳ್ಳು ಎಂದು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸ.ನಂ.92/1 ಐಟಂ ನಂಬರ್ 5 ರಲ್ಲಿ 10 ಗುಂಟೆ ನಿಮ್ಮ ದೊಡ್ಡಪ್ಪ ನಂಜುಂಡಪ್ಪನವರಿಗೆ ಹೋಗಿದೆ ಎಂದರೆ ಯಾರಿಗೂ ಭಾಗ ಹೋಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಅದರಲ್ಲಿ ನಂಜುಂಡಪ್ಪನವರು ರಾಗಿ ಬೆಳೆದಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಭಾವಚಿತ್ರವನ್ನು ತೋರಿಸಿ ಸಾಕ್ಷಿ ನಂಜುಂಡಪ್ಪನವರು ರಾಗಿ ಬೆಳೆದಿದ್ದಾರೆ ಎಂದರೆ ಸಾಕ್ಷಿ ಸರಿ ಎಂದು ಭಾವಚಿತ್ರವನ್ನು ಒಪ್ಪಿಕೊಂಡಿರುತ್ತಾರೆ. ಅದನ್ನು ನಿಡಿ-5 ಮತ್ತು 6 ಎಂದು ಗುರುತಿಸಲಾಯಿತು. ಐಟಂ ನಂಬರ್ 2 ರಲ್ಲಿ ನಿಮಗೆ 18 ಗುಂಟೆ, 1 ಮತ್ತು 2 ನೇ ಪ್ರತಿವಾದಿಯರಿಗೆ ತಲಾ 18 ಗುಂಟೆಯಂತೆ 3 ಜನಕ್ಕೂ ಹೋಗಿದೆ ಎಂದರೆ ಸುಳ್ಳು, ಯಾರಿಗೆ ಎಷ್ಟು ಎಂದು ಹಂಚಿಕೆಯಾಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರ ಭಾಗಕ್ಕೆ ಹೋದ ಜಮೀನನ್ನು ಅವರು ಮಣ್ಣು ಹೊಡೆಸಿ ಸಮತಟ್ಟು ಮಾಡಿರುತ್ತಾರೆ ಎಂದರೆ ಸುಳ್ಳು. ಐಟಂ ನಂಬರ್ 2 ರಲ್ಲಿ ಪ್ರತಿವಾದಿ 1 ಮತ್ತು 2 ರವರು ಮಣ್ಣು ಹೊಡೆಸಿರುವುದು ನಿಮಗೆ ಗೊತ್ತಿದ್ದರೂ ದಾವೆಗಾಗಿ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

5.ರಾಮಪ್ಪ ಎಂದರೆ ನಮ್ಮ ದೊಡ್ಡ ತಾತನ ಮಗ ಕೆ.ಎನ್.ರಾಮಯ್ಯ ಎಂದರೆ ಸರಿ. ನಮ್ಮ ತಂದೆಯವರು ನಿವೇಶನ 2010 ರಲ್ಲಿ ಖರೀದಿ ಮಾಡಿರುತ್ತಾರೆ. 2010 ರಲ್ಲಿ ನಮ್ಮ ತಂದೆಯವರೇ ಮನೆ ಕಟ್ಟಿರುತ್ತೇವೆ. ನೀವು ನಿವೇಶನ ಖರೀದಿ ಮಾಡಿರುವುದಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ 3 ನೇ ವಾದಿಯ ಹೆಸರಿಗೆ ನೋಂದಣಿಯಾಗಿದೆ ಎಂದು ನುಡಿಯುತ್ತಾರೆ. ಅದಕ್ಕೆ ನಮ್ಮ ತಂದೆಯವರೇ ಹಣ ಖರ್ಚು ಮಾಡಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಮನೆಗಳಲ್ಲಿ ಭಾಗ ಮಾಡಿಕೊಳ್ಳುವುದು ಬೇಡ ಹೊಲಗಳಲ್ಲಿ ಮಾತ್ರ ಭಾಗ ಮಾಡಿಕೊಳ್ಳೋಣ ಎಂದು ಪ್ರತಿವಾದಿಯರೇ ಹೇಳಿರುತ್ತಾರೆ. ಅವರು ಆ ರೀತಿ ಹೇಳಿಲ್ಲ ನೀವು ಸುಳ್ಳು ಕಲ್ಪಿಸಿಕೊಂಡು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವೆಂಕಟೇಶಪ್ಪನವರ ಕಡೆಯಿಂದ ನಿಮ್ಮ ತಂದೆಯವರು ನಿವೇಶನ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿ ವೆಂಕಟೇಶಪ್ಪ ಖಾಲಿ ನಿವೇಶನ ತೆಗೆದುಕೊಂಡಿರುತ್ತಾರೆ ನಾವು ಮನೆ ರಾಮಪ್ಪನಿಂದ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಇಬ್ಬರ ಕ್ರಯಪತ್ರವನ್ನು ಕೊಡಲು ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ಇದ್ದರೆ ತಂದುಕೊಡುತ್ತೇನೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ನಿಮ್ಮ ಆಸ್ತಿಯನ್ನು ಇಟ್ಟು ಲೋನ್ ಪಡೆದಿಲ್ಲ ಅವರ ಆಸ್ತಿ ಇಟ್ಟು ಲೋನ್ ಪಡೆದಿದ್ದಾರೆ ಎಂದರೆ ಸಾಕ್ಷಿ ದಾಖಲೆ ಅವರ ಹೆಸರಿಗೆ ಇರುವುದರಿಂದ ಅವರ ಹೆಸರಿಗೆ ಇಟ್ಟು ಲೋನ್ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸಾಲವನ್ನು ನೀವು ಕಟ್ಟಿಲ್ಲ ಎಂದರೆ ಸಾಕ್ಷಿ ನಾವು ತೆಗೆದುಕೊಂಡಿಲ್ಲ ಆದ್ದರಿಂದ ನಾವು ಕಟ್ಟಿಲ್ಲ ಎಂದು ನುಡಿಯುತ್ತಾರೆ.

6. 4 ನೇ ವಾದಿ ನಿಮ್ಮ ತಾತ ತೀರಿಕೊಳ್ಳುವ ಮುಂಚೆಯೇ ಬೆಂಗಳೂರಿನಲ್ಲಿದ್ದರು ಈಗಲೂ ಬೆಂಗಳೂರಿನಲ್ಲಿಯೇ ಇದ್ದಾರೆ ಎಂದರೆ ಸಾಕ್ಷಿ ಜೀವನಕ್ಕಾಗಿ ಬೆಂಗಳೂರಿನಲ್ಲಿದ್ದಾರೆ ಎಂದು ನುಡಿಯುತ್ತಾರೆ. 1984 ರಲ್ಲಿ ವಿಭಾಗಕ್ಕಾಗಿ ಅವರು ಬೆಂಗಳೂರಿನಿಂದ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. 1984 ರಲ್ಲಿ ಆದ ಬಾಯಿಮಾತಿನಲ್ಲಿ ಆದ ವಿಭಾಗ ಪತ್ರವನ್ನು 2024 ರಲ್ಲಿ ಘೋಷಣೆ ಮಾಡಿಕೊಳ್ಳಲು ಅವರು ಬಂದಿದ್ದರು ಎಂದರೆ ಸುಳ್ಳು. 2024 ರಲ್ಲಿ ಅವರು ಭಾಗದಲ್ಲಿ ಭಾಗವಹಿಸಿದ್ದರೂ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆ

ಕೆ.ಎನ್.ರಾಮಯ್ಯನವರಿಂದ ಖಾಲಿ ನಿವೇಶನ ಖರೀದಿ ಮಾಡಿ ಸುಮಾರು ವರ್ಷ ಆಗಿದೆ ಎಂದರೆ ಸುಳ್ಳು. ಅದನ್ನು 3 ನೇ ವಾದಿ ಕೊಂಡುಕೊಂಡು ಅವರ ಮೂಲಕ ನೀವು ಮಾಡಿಕೊಂಡಿದ್ದೀರಿ ಎಂದರೆ ಸುಳ್ಳು. ನಮ್ಮ ತಂದೆ ಆಸ್ತಿಯಲ್ಲಿ ಭಾಗ ಕೊಡದ ಕಾರಣ ಅನಾರೋಗ್ಯದಿಂದ ಮೃತಪಟ್ಟಿದ್ದಾರೆ ಎಂದು ನಾನು ದಾಖಲೆ ನೀಡಿಲ್ಲ. ಮನೆಗಳು ಮತ್ತು ಜಮೀನುಗಳು ಎಲ್ಲವೂ 1984 ರಲ್ಲಿ ವಿಭಾಗ ಆಗಿವೆ ಎಂದರೆ ಸುಳ್ಳು. ಆ ಪ್ರಕಾರ ಪ್ರತಿವಾದಿಗಳು ತಮ್ಮ ಜಮೀನುಗಳನ್ನು ಒಪ್ಪ ಮಾಡಿಕೊಂಡಿದ್ದಾರೆ ಎಂದರೆ ಸುಳ್ಳು. ಅದಕ್ಕೆ ಅವರು ಹೇರಳವಾಗಿ ಹಣ ಖರ್ಚು ಮಾಡಿದ್ದಾರೆ ಎಂದರೆ ಸುಳ್ಳು.

7.ನಮ್ಮ ದೊಡ್ಡಪ್ಪನ ಹೆಸರಿಗೆ ಖಾತೆ ಬಂದಿರುವ ವಿಚಾರ 2023 ರಲ್ಲಿ ತಿಳಿಯಿತು. ಅಲ್ಲಿಯವರೆಗೂ ಖಾತೆ ಯಾರ ಹೆಸರಿನಲ್ಲಿದೆ ಎಂದು ತಿಳಿದುಕೊಳ್ಳಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿ 2020 ರವರೆಗೂ ನಮ್ಮ ತಂದೆ ಇದ್ದರು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ದಾವಾ ಆಸ್ತಿ ನಮ್ಮ ದೊಡ್ಡಪ್ಪನಿಗೆ ಹೋದಾಗ ಪ್ರಶ್ನೆ ಮಾಡಿಲ್ಲ ಎಂದರೆ 2020 ರವರೆಗೂ ನಮ್ಮ ತಂದೆ ಇದ್ದರು ಅವರು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ, 2023 ರಲ್ಲಿ ನಾವು ದಾವೆ ಹೂಡಿದಾಗ ನಮಗೆ ತಿಳಿಯಿತು.

8.ದಾವೆ ಆಸ್ತಿಯನ್ನು ಪ್ರತಿವಾದಿಯರೇ ಮಾರಾಟಕ್ಕೆ ಇಟ್ಟಿದ್ದಾರೆ ಅದನ್ನು ಕೊಂಡುಕೊಳ್ಳಲು ಯಾರು ಬಂದಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಒಟ್ಟು ಕುಟುಂಬದ ಆಸ್ತಿ ಯಾರು ಖರೀದಿ ಮಾಡಬಾರದು ಎಂದು ನೋಟಿಸ್ ನೀಡಿಲ್ಲ. ಈಗಾಗಲೇ ವಿಭಾಗ ಆಗಿದ್ದು ಅದನ್ನು ಮತ್ತೊಮ್ಮೆ ವಿಭಾಗ ಮಾಡಿಕೊಳ್ಳಲು ಆಗುವುದಿಲ್ಲ ಎಂದು ಗೊತ್ತಿದ್ದರೂ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವೆ ಹೂಡಿದ್ದೀರಿ ಎಂದರೆ ಸರಿಯಲ್ಲ. ವಿಭಾಗದಂತೆ ಯಾರ್ಯಾರಿಗೆ ಯಾವ್ಯಾವ ಆಸ್ತಿ ಹೋಗಿದೆ ಅದರಂತೆ ಅವರೆಲ್ಲರೂ ನೀವೂ ಸೇರಿ ಸ್ವಾಧೀನದಲ್ಲಿದ್ದೀರಿ ಎಂದರೆ ಸುಳ್ಳು. ಆ ರೀತಿ ಆದ ವಿಭಾಗದ 2024 ರ ಘೋಷಣಾ ಪತ್ರಕ್ಕೆ ನಿಮ್ಮ ತಾಯಿ ಮಾತುಕೇಳಿ ಯಾರು ಸಹಿ ಮಾಡಿಲ್ಲ ಎಂದರೆ ಸುಳ್ಳು.

9.ನಿಪಿ–1 ರಲ್ಲಿ ಕೆ.ಎನ್.ರಾಮಯ್ಯನವರಿಗೆ ಹೋಗಿರುವ ದಾಖಲೆ ನಿಮ್ಮ ಕುಟುಂಬಕ್ಕೆ ಬಂದ ಸ್ವತ್ತಿನ ದಾಖಲೆ ಅಲ್ಲ ಎಂದರೆ ಜಂಟಿ ಇದೆ ಎಂದು ಸಾಕ್ಷಿ

ನುಡಿಯುತ್ತಾರೆ. ನಿಪಿ–2 ರಲ್ಲಿ ಮುನಿಶಾಮಪ್ಪ ಬಿನ್ ನಾರಾಯಣಪ್ಪ ನಿಮ್ಮ ತಾತನವರ ನಡುವೆ ವಿಭಾಗ ಆದ ದಾಖಲೆ ಎಂದರೆ ಸರಿ. ಆ ವಿಭಾಗದಲ್ಲಿಯೇ ದಾವೆ ಆಸ್ತಿಗಳು ನಿಮ್ಮ ತಾತನಿಗೆ ಬಂದಿವೆ ಎಂದರೆ ಸರಿ.

10.ಈ ದಾವೆ ಹೂಡುವ ಮುಂಚೆ ನನಗೆ ಖಾತೆಗಳ ಬಗ್ಗೆ ಗೊತ್ತಿರಲಿಲ್ಲ 2023 ರಲ್ಲಿ ಖಾತೆ ಆಗಿರುವ ಬಗ್ಗೆ ಗೊತ್ತಾಯಿತು. ನಾವು 2023 ರವರೆಗೂ ಇವಾಗಿನವರೆಗೂ ಕಾಜಿಕಲ್ಲಳ್ಳಿಯಲ್ಲಿ ವಾಸ ಇದ್ದೇವೆ. ಆಗಿದ್ದರೂ ಸಹ 2023 ರಲ್ಲಿ ತಿಳಿಯಿತು ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 2023 ರವರೆಗೂ ನಮ್ಮ ತಂದೆಯವರು ಇದ್ದರೂ ಆಗ ಅವರ ಜವಾಬ್ದಾರಿ ಇತ್ತು. ನಿಮ್ಮ ತಂದೆ, ತಾಯಿ ಎಲ್ಲರಿಗೂ ಗೊತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಚಿಕ್ಕಪ್ಪನವರಿಗೂ ಗೊತ್ತಿತ್ತು ಅವರು ನನಗೆ 2023 ರಲ್ಲಿ ಈ ವಿಚಾರ ತಿಳಿಸಿರುತ್ತಾರೆ. ಪ್ರತಿವಾದಿಯರಿಗೆ ವಿನಾಕಾರಣ ತೊಂದರೆ ಕೊಡಬೇಕು ಎಂದು ಸುಳ್ಳು ದಾವೆ ಹಾಕಿದ್ದೀರಿ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓದಿ, ಹೇಳಿ, ಕೇಳಿ, ಸರಿ ಇದೆ.**

ಸಹಿ/-
(ರಿಹಾನ ಸುಲ್ತಾನ)
2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕೋಲಾರ.